

# ರವಿಕಾಣದ ಅಲ್ಪಾಯುಷಿ-ಬೆಳದಿಂಗಳ ಬಾಲೆ ಬ್ರಹ್ಮ ಕಮಲ

- ಡಾ.ಸತ್ಯ

ಅರೆರೆ ಇದೇನಿದು ಮೊನ್ನೆ ಮೊನ್ನೆ ತನಕ ಕುಟುಕು ಜೀವ ಹಿಡಿದಿದ್ದ ೬ ಅಡಿ ಕಾಂಡ ಮೊದಲ ಮಳೆ ಬಿತ್ತಲ್ಲ ನಿಖರವಾಗಿ ಮೂರುವಾರದಲ್ಲಿ ೬ ಅಡಿ ಗಿಡದಲ್ಲಿ ೧೬ ಮೊಗ್ಗು ಗಳು ಒಂದೇ ರಾತ್ರಿ ಅರಳಿಬಿಟ್ಟವು. ಬೆಳದಿಂಗಳ ರಾತ್ರಿಯಲ್ಲಿ ಆಗಸದ ಚಂದ್ರನಂತೆ   ಕಂಗೊಳಿಸುವ ನವಿರು ಕಂಪಿನ ಹೂಗಳವು.ಅಬ್ಬಾ ಅದೇನು ಸೊಗಸು, ಅದೇನು ಕಂಪು.



ಹೂ ಮೊಗ್ಗುಗಳು ಅರಳುವುದು ಗಿಡದಲ್ಲಿ ನಿಜ. ಆದರೆ ಇದು ಎಲೆಯೇ ಅಥವಾ ಕಾಂಡವೇ ಎಂಬ ಗೊಂದಲ ನಿಮಗಿರಬಹುದು. ಇದು ಗಿಡವೂ ಹೌದು ಕಾಂಡವೂ ಹೌದು. ಫಿಲ್ಲೋಕ್ಲೇಡ್ ಎಂಬ ವೈಜ್ಞಾನಿಕ ಪರಿಭಾಷೆಯಲ್ಲಿ ಇದು

ವರ್ಣಿತ. ಗಿಡದ ಎಲೆಯೊಂದು ಕಾಂಡದ ರೂಪದಲ್ಲಿ ಎಲ್ಲಾ ಕೆಲಸ ನಿರ್ವಹಿಸುವ ಅಪರೂಪದ ನಿದರ್ಶನವಿದು. ಡುಬ್ಬುಕಳ್ಳಿ ಅಥವಾ ಪಾಪಸ್‌ಕಳ್ಳಿ ಗೊತ್ತಿರಬೇಕಲ್ಲ. ಅದರ ಕುಲ ಈ ಗಿಡದ್ದು. ಅದರ ಹೂ ಹಳದಿ, ಹಣ್ಣು ಕಡುಕೆಂಪು. ಕಳಿತ ಹಣ್ಣು ಹುಳಿಸಹಿ ರುಚಿ ತಿನ್ನುತ್ತಾರೆ ಕೂಡ.ಆದರೆ ಬ್ರಹ್ಮಕಮಲದಲ್ಲಿ ಕಾಯಿಬಾರದು.ಕಳ್ಳಿ ಹಾಗೂ ಬ್ರಹ್ಮಕಮಲದ ಎಲೆ ಅರ್ಥಾತ್ ಕಾಂಡದ ಗಿಣ್ಣೊಂದನ್ನು ಹದ ಮಣ್ಣಿನಲ್ಲಿ ಊರಿದರೆ ಸಾಕು ಹೊಸ ಗಿಡ ತಯಾರು. ಇಂತಹ ಸಸ್ಯಗಳ ಕುಲ ಕ್ಯಾಕ್ಟೇಸಿ.



ಜಗತ್ತಿನ ಎಲ್ಲ ದೇಶಗಳಲ್ಲಿ ಅಂದಚೆಂದಕ್ಕೆ ಹೆಸರಾದ ಸುಮಾರು ೧೨೦೦ ಪ್ರಭೇದಗಳು ಈ ಕುಲದಲ್ಲಿ ಅಡಕಗೊಳ್ಳುತ್ತವೆ. ಮನೆಯ ಒಳಗೆ ಕುಂಡದಲ್ಲಿ ಅಥವಾ ಹದ ನೆಲದಲ್ಲಿ ನೆಡಬಹುದಾದ ಕಳ್ಳಿ ಜಾತಿಯ ಈ ಸಸಿಗಳು ಅಂದಚೆಂದದ ಹೂಗಳಿಗೆ ಹೆಸರಾದವು. ಪಾಪಾಸು ಕಳ್ಳಿಯ ಹೂ ಬ್ರಹ್ಮಕಮಲದಷ್ಟು ಅಲ್ಪಾಯುಷಿ ಅಲ್ಲ. ಎರಡುಮೂರು ದಿನ ಉಳಿಯುವಂತಹ ಚಿನ್ನ ಬಣ್ಣದ ಹೂ ಅದು. ಆದರೆ ಬ್ರಹ್ಮಕಮಲದ್ದು ಅಚ್ಚಬಿಳಿಯ ಬಣ್ಣದ್ದು. ಸುಮಾರು ೬-೭ ಇಂಚು ಉದ್ದದ ತಿಳಿಕೆಂಪು ಕೋಳಿಪುಕ್ಕದ ಆಕಾರದ ಚೂಪುರಚನೆಗಳುಳ್ಳ ಉದ್ದನೆಯ ತೊಟ್ಟು. ಸುಮಾರು ೩-೪ ಸಾಲುಗಳಲ್ಲಿ ಅರಳುವ ಸುಂದರ ದಳಗಳು. ಒಳಗೆ ಒಂದೇ ಸಾಲಿನಲ್ಲಿ ಅಸಂಖ್ಯ ಕೇಸರಗಳು. ಇಂತಹ ಸುಂದರ ಹೂವು ಕೆಲವೊಮ್ಮೆ ಸರಿರಾತ್ರಿಗು ಅರಳುವುದುಂಟು. ನೀವು ಅದೃಷ್ಟಶಾಲಿಗಳಾಗಿದ್ದರೆ ಸೂರ್ಯಾಸ್ತಮಾನದ ವೇಳೆಗೆ ಅರಳೀತು. ಆದರೆ ನೇಸರನ ಉದಯದ ಮೊದಲೇ ಬಾಡಿ ಬಸವಳಿಯುತ್ತದೆ.  ಕುಂಡದಲ್ಲಿ ಅಥವಾ ಮಣ್ಣಿನಲ್ಲಿ ಅಂಗೈಅಗಲದ ಎಲೆ/ಕಾಂಡ ಊರಿಬಿಡಿ. ಮುಂದೆ ವರ್ಷದ ತನಕ ಹದನಾಗಿ ನೀರುಣಿಸಿದರೆ ಸಾಕು. ಎಲೆಅಂಚಿನ ಗಿಣ್ಣುಗಳಿಂದ ಹೊಸಚಿಗುರೊಡೆಯುತ್ತದೆ. ಮೊಗ್ಗುಗಳೂ ಸಹ ಮುಂದಿನ ಮಳೆಯವರೆಗೆ ಚಾತಕಪಕ್ಷಿಯಂತೆ ಕಾಯುವ ಬ್ರಹ್ಮಕಮಲದ ವೈಜ್ಞಾನಿಕ ಹೆಸರು ಎಪಿಫಿಲ್ಲಂ ಆಕ್ಸಿಪೆಟಲಂ. ಗಾಜಿನ ಮನೆಯೊಳಗೂ ಬೆಳಸಬಲ್ಲ ಸೌಕರ್ಯ ಈ ವಿಚಿತ್ರ ಗಿಡಕ್ಕಿದೆ.  ಏನೂ ಕಾಯಿಲೆ ಬಾರದು. ಗೊಬ್ಬರ, ಆರೈಕೆ ಬೇಡದು.

***